Sri H. SIDDAVEERAPPA (Minister for Health).—

(*a*) No.

(*b*) After the formation of a new P.W.D. Sub-Division at Srinivasapur, the Lakshmipura L.F. Dispensary Building was left over in the list to be maintained by annual repairs under Srinivasapur Sub-Division. It has been included for annual repairs during 1973-74.

ಶ್ರೀ ಎಸ್. ಬಾಜೀ ರೆಡ್ಡಿ:—ಸ್ವಾಮಿ, ಶ್ರೀನಿವಾಸಪುರ ತಾಲ್ಲೂಕು ಲಕ್ಷ್ಮೀಪುರದ ಆಸ್ಪತ್ರೆಯನ್ನು 20 ವರ್ಷದ ಕೆಳಗೆ ಒಬ್ಬ ದಾನಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿಸಿದನು. ಈ ಕಟ್ಟಡ 10-12 ವರ್ಷಗಳಿಂದಲೂ ಸ್ವಚ್ಛತೆ ಇಲ್ಲದೆ ದುರಸ್ತಿಯಾಗಿಲ್ಲ. ಇದನ್ನು ದುರಸ್ತಿ ಮಾಡದೇ ಇರುವುದರಿಂದ ಆ ದಾನಿಯ ಮನಸ್ಸು ಎಷ್ಟು ನೊಂದಿರಬಹುದು ಎನ್ನುವುದನ್ನು ಸರ್ಕಾರದವರು ಗಮನಿಸಬೇಕು. ಆದುದರಿಂದ ಆ ಕಟ್ಟಡದ ರಿಪೇರಿ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ :—ಈ ಬಗ್ಗೆ ನಾನು ಉತ್ತರದಲ್ಲೇ ಹೇಳಿದ್ದೇನೆ. 1973—74 ರಲ್ಲಿ ವಾರ್ಷಿಕವಾಗಿ ಕೈಕೊಳ್ಳಬೇಕಾಗಿರುವ ದುರಸ್ತಿ ಕಾಮಗಾರಿಗಳಲ್ಲಿ ಇದನ್ನು ಸೇರಿಸಲಾಗಿದೆ ಎಂದು ಹೇಳಿದ್ದೇನೆ. ಆ ಪ್ರಕಾರ ಅವರು ಮಾಡಿಸುತ್ತಾರೆ.

Short Notice Question and Answer

BONUS TO WORKERS OF BANDIGUDDA MINES

40. Sri S. M. SHEERANALY CHANDRASEKHAR, (Hosanagar).—

Will the Minister for Industries be pleased to state :—

(*a*) whether the Government is aware that $8\frac{1}{4}$ per cent bonus is not paid to the workers of the Bandigudda Mines even though there is provision in Central Bonus Act ;

(*b*) if so, the action Government propose to take in the matter ?

Sri S. M. KRISHNA (Minister for Industries).—

(*a*) The workers of Mysore Iron and Steel Ltd., working in Bandigudda Mines had been paid bonus at 8.33 per cent of the total salary/wages earned by them for the year 1971-72 as per the provisions of Payment of Bonus Act.

(*b*) Does not arise.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್ :—ಎಂಟುಕಾಲು ಪರ್ಸೆಂಟ್ ಬೋನಸ್ ಕೊಟ್ಟಿರುವುದಾಗಿ ಹೇಳಿದ್ದಾರೆ. ಯಾವ ತಾರೀಖಿಗೆ ಕೊಟ್ಟಿದ್ದಾರೆಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಸ್. ಎಂ. ಕೃಷ್ಣ :—ಅಲ್ಲಿ ಎರಡು ತರಹ ಕೆಲಸಗಾರರಿದ್ದಾರೆ. ಒಬ್ಬರು ಮೈಸೂರ್ ಐರನ್ ಅಂಡ್ ಸ್ಟೀಲ್‌ನಲ್ಲಿ ನೇರವಾಗಿ ಕೆಲಸ ಮಾಡುತ್ತಿರುವವರು. ಅವರಿಗೆ 8.33 ಪರ್ಸೆಂಟ್ ಬೋನಸ್ ಕೊಟ್ಟಿದ್ದೇವೆ. ತಾರೀಖು ಸದ್ಯದಲ್ಲಿ ಸಿಕ್ಕುವುದಿಲ್ಲ. ಇನ್ನು ಕೆಲವು ಕಂಟ್ರಾಕ್ಟರು ಗಳಿದ್ದಾರೆ, ಅವರ ಕೈಕೆಳಗೆ ಕೆಲಸ ಮಾಡುತ್ತಿರುವ ಕೆಲಸಗಾರರಿಗೂ 8.33 ಪರ್ಸೆಂಟ್ ಬೋನಸ್ ಕೊಡಬೇಕೆಂದು ಸ್ಪಷ್ಟವಾಗಿ ಕಂಟ್ರಾಕ್ಟರುಗಳಿಗೆ ಸೂಚನೆ ಕೊಟ್ಟಿದೆ. ಅಲ್ಲಿ ಸ್ವಲ್ಪ ವ್ಯತ್ಯಾಸಗಳಿರ ಬಹುದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಕಂಟ್ರಾಕ್ಟರ್ ಲೇಬರರ್ಸ್‌ಗೆ ಯಾವ ತರಹ ಬೋನಸ್ಸೂ ಕೊಟ್ಟಿಲ್ಲವೆನ್ನುವುದು ಗೊತ್ತಿದೆಯೇ ? ಗೊತ್ತಿದ್ದರೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :—ನಾವು ಅವರಿಗೆ ಈಗಾಗಲೇ ತಿಳಿಸಿದ್ದೇವೆ. 1972-73ನೇ ಇಸವಿಗೆ ಕಂಟ್ರಾಕ್ಟರುಗಳು 8.33 ಪರ್ಸೆಂಟ್ ಬೋನಸ್ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ :—ಕಂಟ್ರಾಕ್ಟರುಗಳು 8.33 ಪರ್ಸೆಂಟ್ ಬೋನಸ್ ಕೊಡದೆ ಇರುವುದು ಪೇಮೆಂಟ್ ಆಫ್ ಬೋನಸ್ ಆಕ್ಟ್‌ಗೆ ವಿರೋಧವಲ್ಲವೇ ? ಹಾಗೆ ಕಾನೂನಿಗೆ ವಿರೋಧವಾಗಿರುವಾಗ ಕಾನೂನು ಪ್ರಕಾರ ಶಿಕ್ಷೆ ವಿಧಿಸಬೇಕು ಎಂದು ಇದೆ. ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ ?

ಶ್ರೀ ಎಸ್. ಎಂ. ಕೃಷ್ಣ :—ಈಗ ನಾವು ನೇರವಾಗಿ 8.33 ಪರ್ಸೆಂಟ್ ಬೋನಸ್ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ನಮ್ಮ ಈ ಸೂಚನೆಯನ್ನು ಅವರು ಧಿಕ್ಕರಿಸಿದರೆ ನಾವೇ ನೇರವಾಗಿ ಕಂಟ್ರಾಕ್ಟರುಗಳಿಗೆ ಕೊಡತಕ್ಕ ಹಣದಲ್ಲಿ ಹಿಡಿದು ಕೆಲಸಗಾರರಿಗೆ ಕೊಡಬೇಕೆಂಬ ತೀರ್ಮಾನ ತೆಗೆದುಕೊಳ್ಳುತ್ತೇವೆ.

Sri ABDUL KHUDDUS ANWAR.—What about 1971-72 ?

ಶ್ರೀ ಎಸ್. ಎಂ. ಕೃಷ್ಣ :—1971-72 ರಲ್ಲಿ 8.33 ಪರ್ಸೆಂಟ್ ಬೋನಸ್ ಇತ್ತೋ, ಇಲ್ಲವೋ ಗೊತ್ತಿಲ್ಲ.

MADAM SPEAKER.—Now question hour is over.

Questions for Answers on the Day (but not taken up)

REMISSION OF LAND REVENUE IN CHITRADURGA DISTRICT

649. Sri V. MASIYAPPA (CHALLAKERE).—

Will the Minister for Revenue be pleased to state :—